**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ MVC–1273/2022**

**ದಿನಾಂಕ 03–07–2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಗುರುರಾಜ | RW–1 |
| ತಂದೆಯ ಹೆಸರು | ಃ | ಶಿವರಾಯ ರದ್ದೆವಾಡಗಿ | |
| ವಯಸ್ಸು | ಃ | 34 ವರ್ಷ | |
| ಉದ್ಯೋಗ | ಃ | ಚಾಲಕ | |
| ವಾಸಸ್ಥಳ | ಃ | ಹಸನಾಪೂರ | |

**ಮುಖ್ಯ ವಿಚಾರಣೆಃ ಶ್ರೀ ಬಿ.ಎ.ಎಸ್. ಅರ್ಜಿದಾರರ ಪರ ವಕೀಲರಿಂದಃ**

ಮುಖ್ಯ ವಿಚಾರಣೆ ಬದಲಾಗಿ ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್.ಎ.ಕೆ. ಅರ್ಜಿದಾರರ ಪರ ವಕೀಲರಿಂದ**

ಟ್ರ್ಯಾಕ್ಟರ್ ನೊಂದಣಿ ಸಂಖ್ಯೆ ಕೆಎ–32 ಟಿಬಿ–6141 ರ ಮಾಲೀಕ ನಾನೇ ಎಂದರೆ ನಿಜ. ಅಪಘಾತದ ಸಮಯದಲ್ಲಿ ಸದರಿ ಟ್ರ್ಯಾಕ್ಟರ್ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ನಿಜ. ಅಪಘಾತದ ಸಮಯದಲ್ಲಿ ನಾನು ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ವಾಹನ ಚಾಲನಾ ಪರವಾನಿಗೆ ಪತ್ರ ಇತ್ತು ಅದು ಕಳೆದುಹೋಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ವಾಹನ ಚಾಲನಾ ಪರವಾನಿಗೆ ಕಳೆದುಹೋಗಿರುತ್ತದೆ ಎಂದು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಕಚೇರಿಗೆ ಅರ್ಜಿ ನೀಡಿಲ್ಲ. ನಾನು ನನ್ನ ವಾಹನ ಚಾಲನಾ ಪರವಾನಿಗೆ ಪತ್ರವನ್ನು ಹೊಂದಿರದೇ ಇದ್ದರೂ ಸಹ ನನ ನನ್ನ ವಾಹನ ಚಾಲನಾ ಪರವಾನಿಗೆ ಪತ್ರ ಕಳೆದುಹೋಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವು ಜೇವರ್ಗಿ–ಕಲ್ಬುರ್ಗಿಯ ರಸ್ತೆಯ ಎಡಭಾಗದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ರಸ್ತೆಯ ಬಲಭಾಗದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಜೇವರ್ಗಿ–ಕಲ್ಬುರ್ಗಿ ರಸ್ತೆಯ ಎಡಭಾಗದಲ್ಲಿ ಟ್ರ್ಯಾಕ್ಟರಿನಲ್ಲಿ ಜೋರಾಗಿ ಹಾಡನ್ನು ಹಾಕಿ ಟ್ರ್ಯಾಕ್ಟರನ್ನು ಚಲಾಯಿಸಿಕೊಂಡು ಮುಂದೆ ಹೋಗುತ್ತಿದ್ದ ಮೃತ ದಾವಲಸಾಬರವರ ದ್ವಿ–ಚಕ್ರ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದಿರುತ್ತೇನೆ

ಎಂದರೆ ಸರಿಯಲ್ಲ. ನಾನು ಟ್ರ್ಯಾಕ್ಟರನ್ನು ದಾವಲಸಾಬರವರ ದ್ವಿ-ಚಕ್ರ ವಾಹನಕ್ಕೆ ಡಿಕ್ಕಿಹೊಡೆದಿದ್ದರಿಂದ ನನ್ನ ಟ್ರ್ಯಾಕ್ಟರಿನ ಬಲಭಾಗದ ಬಂಪರ್ ಜಖಂಗೊಂಡಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಟ್ರ್ಯಾಕ್ಟರಿನ ಬಲಭಾಗದ ಬಂಪರ್ ಜಖಂಗೊಂಡಿರುತ್ತದೆ ಎಂದು RTO ರವರು ನಿಪಿ-6 ರಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ.

ಸೋಮರಾಯ ಗೋಳೇದರವರು ನನ್ನ ದೊಡ್ಡಪ್ಪ. ಸದರಿ ಸೋಮರಾಯರವರ ಮಗ ಭೀಮಾಶಂಕರ ಗೋಳೇದರವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪೊಲೀಸ್ ಜಿಲ್ಲಾ ಅಧೀಕ್ಷಕರಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆನಂತರ ಪುನಃ ಸಾಕ್ಷಿ ಜಿಲ್ಲಾ ಅಧೀಕ್ಷಕರಾಗಿದ್ದಾರೆ ಆದರೆ ಈಗ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಅಪಘಾತವು ನನ್ನ ಒಬ್ಬನ ತಪ್ಪಿನಿಂದ ಆಗಿದ್ದರೂ ಸಹ ಸಂಬಂಧಿಕ ಪೊಲೀಸ್ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿ ಇದ್ದ ಕಾರಣ ಅವರ ಪ್ರಭಾವ ಬಳಸಿಕೊಂಡು ಮೃತ ದಾವಲಸಾಬರವರ ಮೇಲೆ ಸಹ ದೋಷಾರೋಪಣೆ ಪಟ್ಟಿ ಸಲ್ಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಪ್ಪಿನಿಂದ ಅಪಘಾತವಾದ ಕಾರಣ ನಾನು ಟ್ರ್ಯಾಕ್ಟರನ್ನು ಅಲ್ಲಿಯೇ ನಿಲ್ಲಿಸಿ ಓಡಿಹೋಗಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದ್ದರೂ ಸಹ ನಾನು ಪ್ರಭಾವ ಬೀರಿಸಿ ಅಪಘಾತದ ಸ್ಥಳವು ರಸ್ತೆ ಮಧ್ಯದಲ್ಲಿ ಆಗಿರುವಂತೆ ತೋರಿಸುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಟ್ರ್ಯಾಕ್ಟರ್ ವಾಹನಕ್ಕೆ ವಿಮೆ ಇರದ ಕಾರಣ ಹಾಗೂ ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿರದ ಕಾರಣ ಮೃತ ದಾವಲಸಾಬರವರ ವಾರಸುದಾರರಿಗೆ ಪರಿಹಾರ ಧನ ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಮೃತ ದಾವಲಸಾಬರವರ ಮೇಲೆ ಸಹ ದೋಷಾರೋಪಣೆ ಪಟ್ಟಿ ಸಲ್ಲಿಸಿರುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ತಪ್ಪಿನಿಂದ ಅಪಘಾತವಾದ ಕಾರಣ ಕೇಸು ಮಾಡಿರುವೆ ಎಂದು ನುಡಿಯುತ್ತಾರೆ.

ನಾನು ಮೃತ ದಾವಲಸಾಬರವರ ಮೇಲೆ ಪೊಲೀಸ್ ಕೇಸ್ ಮಾಡಿರುತ್ತೇನೆ, ಅದರ ನಂಬರ್ ನನಗೆ ಗೊತ್ತಿಲ್ಲ. ನಾನು ಕೇಸನ್ನು ಪೊಲೀಸ್ ಠಾಣೆಯಲ್ಲಿ ದಿನಾಂಕ 13-08-2022 ರಂದು ನೀಡಿರುತ್ತೇನೆ. ನಾನು ಪೊಲೀಸರಿಗೆ ಯಾವುದೇ ದೂರನ್ನು ನೀಡಿದೇ ಇದ್ದರೂ ಸಹ ದೂರನ್ನು ಸಲ್ಲಿಸಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಧನ ಕೊಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು

ಜೇವರ್ಗಿ